


### ರೋಗಿಗಳಿಗೆ ಆತ್ಮವಿಶ್ವಾಸ

'ಹೃದಯ ಕಸಿ; ಇಲ್ಲ ಕಸಿವಿಸಿ', ನವೀನ್ ಅಮ್ಮೆಂಬಳ ಅವರು ಬರೆದ ಮುಖಪುಟ ಲೇಖನ (ಸುಧಾ, ಮಾರ್ಚ್, 19) ನಿಜಕ್ಕೂ ಹೃದ್ರೋಗಿಗಳಿಗೆ ಆತ್ಮವಿಶ್ವಾಸ ಹುಟ್ಟಿಸುವಂತಿದೆ. ಇಂದಿನ ಆಧುನಿಕ ವೈದ್ಯಕೀಯ ರಂಗ ದಲ್ಲಿ ಅಸಾಧ್ಯ ಎನ್ನುವುದು ಇಲ್ಲ ಎಂಬಂತಾಗಿದೆ. ಯಾರು ಹೃದಯ ದಾನ ಮಾಡಬಹುದು, ಯಾರು ಕಸಿ ಮಾಡಿಸಿಕೊಳ್ಳಬಹುದು ಎಂಬುದನ್ನು ಲೇಖನ ಸವಿವರವಾಗಿ ತಿಳಿಸಿದೆ.

– ಹೇಮಾ ಸುಬ್ರಹ್ಮಣ್ಯ, ಹಾಲ್ಮುತ್ತೂರು

### ಸಂಗ್ರಹಯೋಗ್ಯ ಲೇಖನ

ಹೃದಯ ಕಸಿ ಬಗ್ಗೆ ಓದಿದಾಗ ಒಮ್ಮೆ ಹೃದಯಬಡಿತವೇ ನಿಂತಂತಾಯಿತು. ಮೆದುಳು ಸಾವಿನ ಬಗ್ಗೆ ವಿವರ, ಹೃದಯದಾನದ ಮಹತ್ವ, ಬೇಕಾದ ಅರ್ಹತೆ ಬಗ್ಗೆ ಲೇಖನ ತಿಳಿಸಿದೆ.

–ಎಂ.ಆರ್. ಶರ್ಮಿಳಾ ಮಂಜುನಾಥ, ತೀರ್ಥಹಳ್ಳಿ

### ಸೌಲಭ್ಯ ಕಲ್ಪಿಸಬೇಕು

ಮಧುಗಿರಿ ಏಕಶಿಲಾ ಬೆಟ್ಟ ಪ್ರವಾಸ ಲೇಖನದಲ್ಲಿ ಲೇಖಕರು ಬೆಟ್ಟದ ಸೊಗಸನ್ನು ವರ್ಣಿಸಿದ್ದಾರೆ.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಸ್ಟ್ಯಾಂಪ್ ಡ್ಯೂಟಿ

ಸ್ಟ್ಯಾಂಪ್ ಡ್ಯೂಟಿ (ಮನೋಜ್ ಕುಮಾರ್ ಗುದ್ದಿ) ಲೇಖನದಲ್ಲಿ ಬರೆದ ಸುಧೀಂದ್ರ ಭೇಂಡೆ ಅವರ ಹವ್ಯಾಸ, ಸ್ಟ್ಯಾಂಪ್ ಸಂಗ್ರಹ ಇಷ್ಟವಾಯಿತು.

–ಸುಶಾಂತ ಗಬಡಿ

### ಚಿತ್ರ ನಿರ್ದೇಶಕ ಎಂದಾಗಬೇಕು

ಸ್ಟ್ಯಾಂಪ್ ಡ್ಯೂಟಿ ಲೇಖನದಲ್ಲಿ ಸಂಗೀತ ನಿರ್ದೇಶಕ ಹೃಷಿಕೇಶ ಮುಖರ್ಜಿ ಎಂದಿರುವುದು ತಪ್ಪು, ಅದು ಚಲನಚಿತ್ರ ನಿರ್ದೇಶಕ ಎಂದಾಗಬೇಕು.

–ಮುಕುಂದ ಹೆರಕಲ್ಲ, ಕಲಬುರಗಿ

### ನಿಧನ ಸುದ್ದಿ ಆಘಾತ

ಬೂತಯ್ಯನ ರೂವಾರಿ ಸಿದ್ದಲಿಂಗಯ್ಯ (ಗಾಂಧಿನಗರ ಪೋಸ್ಟ್) ಅವರಿಗೆ ಮುಕ್ತ ವಿವಿ ಗೌರವ ಡಾಕ್ಟರೇಟ್ ಸಿಕ್ಕ ಸಂತಸದಲ್ಲಿ ಮನಸ್ಸು ಪುಳಕಿತ ವಾಗಿತ್ತು. ಅದಾಗಿ ಕೆಲ ಕ್ಷಣಗಳಲ್ಲಿ ಅವರ ನಿಧನದ ಸುದ್ದಿ ಆಘಾತ ತಂದಿತು.

–ಬಿ.ಎಚ್. ರಮೇಶ್, ಬೆಂಗಳೂರು, ಪುಟ್ಟಗೌರಿ ಚಿದಾನಂದ

### ಅನಗತ್ಯ ಶಸ್ತ್ರಚಿಕಿತ್ಸೆ

'ನಿಮ್ಮೊಡನೆ'ಯಲ್ಲಿ ಬಿ.ಎಂ. ಹನೀಫ್ ಅವರು 'ಅನಗತ್ಯ ಶಸ್ತ್ರಚಿಕಿತ್ಸೆ' ಬಗ್ಗೆ ಬರೆದ ಬರಹ ಸಕಾಲಿಕ. ಆಸ್ಪತ್ರೆಗಳಲ್ಲಿ ಹಾಸಿಗೆ ಖಾಲಿ ಇವೆ ಎಂದು ದಾಖಲಿಸಿ ಕೊಳ್ಳುವುದು, ಬೆಲೆ ಬಾಳುವ ಯಂತ್ರಗಳಿಂದ ಆದಾಯ ಗಳಿಸಲು ಚಿಕಿತ್ಸೆ ಮಾಡುವುದು ಕೆಲವೊಮ್ಮೆ ಕಂಡುಬರುತ್ತಿದೆ. ರೋಗಿಯ ಅಮಾಯಕತೆಯನ್ನು ವೈದ್ಯರು ದುರುಪಯೋಗಪಡಿಸಿ ಕೊಳ್ಳುತ್ತಿರುವುದು ವಿಷಾದನೀಯ.

–ಮಹಾವೀರ ಕಾಸರ, ಶಿವಮೊಗ್ಗ, ಎಸ್. ಪ್ರಭಾ, ಬೆಂಗಳೂರು

### ವೆಲ್ತ್ ಕೇರ್

ಕಮಿಶನ್ ಪಿಡುಗಿನಿಂದ ಜನಸಾಮಾನ್ಯರು ಈ ದುಷ್ಟ 'ವೈದ್ಯ– ಕ್ಲಿನಿಕ್– ಫಾರ್ಮಸಿಗಳ' ತ್ರಿಕೋನ ಕಪಿಮುಷ್ಟಿಯಲ್ಲಿ ನಲುಗುತ್ತಿರುವಾಗ ಒಂದೊಮ್ಮೆ 'ಹೆಲ್ತ್ ಕೇರ್ ' ಎಂದು ಕರೆಯಲ್ಪಡುತ್ತಿದ್ದ ಈ ಸೇವೆ, ಈಗ ಅವರ ಸ್ವಂತ 'ವೆಲ್ತ್ ಕೇರ್' ಆಗಿ ಬದಲಾಗಿದೆ ಎಂಬುದು ಕಹಿ ಸತ್ಯ.

–ನಾಗೇಶ್ ಕುಮಾರ್ ಸಿ.ಎಸ್. ಚೆನ್ನೈ

### ನೈಜ ಘಟನೆ

ನಮ್ಮ ಬಂಧು ಒಬ್ಬರು ನಿಷ್ಣಾತ ಹೆರಿಗೆ ಡಾಕ್ಟರ್ ಆಗಿ ವಿದೇಶದಲ್ಲಿ ಖ್ಯಾತರು. ಭಾರತದಲ್ಲೇ ವೃತ್ತಿ ಮುಂದುವರಿಸುವ ಉದ್ದೇಶದಿಂದ ಇಲ್ಲಿಗೆ ಬಂದು ಮೂರು–ನಾಲ್ಕು ನರ್ಸಿಂಗ್ ಹೋಂ ಸಂಪರ್ಕಿಸಿದರು. ಎಲ್ಲ ನರ್ಸಿಂಗ್ ಹೋಂ ಮಾಲಿಕರ ಉತ್ತರ ಒಂದೇ. ನಮ್ಮಲ್ಲಿ ಕನ್ಸಲ್‌ಟೆಂಟ್ ಆಗಬೇಕಾದರೆ ತಿಂಗಳಿಗೆ ಇಂತಿಷ್ಟು ಬಿಲ್ ಆಗುವಷ್ಟು ಸಿಸೇರಿಯನ್‌ಗೆ ಗರ್ಭಿಣಿಯರನ್ನು ಕಳಿಸಬೇಕು ಎಂಬುದು. ನಂಬಿಕೆ ದ್ರೋಹ ಕೆಲಸ ಮಾಡಲಾರೆ ಎಂದು ಅವರು ಮತ್ತೆ ವಿದೇಶಕ್ಕೆ ತೆರಳಿದರು. ಇದು ನೈಜ ಘಟನೆ.

–ಕೋಟೇಶ್ವರ ಸೂರ್ಯನಾರಾಯಣರಾವ್, ಬೆಂಗಳೂರು

### ಅಕ್ಷರಶಃ ಸತ್ಯ

'ನಿಮ್ಮೊಡನೆ'ಯಲ್ಲಿ ಬರೆದಿರುವುದು ಅಕ್ಷರಶಃ ಸತ್ಯ. ನನಗೂ ಕಳೆದ ಮೂರು ವರ್ಷಗಳಿಂದ ಬೆಂಗಳೂರಿನ ಒಂದು ಆಸ್ಪತ್ರೆಯವರು 'ಬೊಜ್ಜು ಶಸ್ತ್ರಚಿಕಿತ್ಸೆ (ಬೇರಿಯಾಟ್ರಿಕ್ ಸರ್ಜರಿ) ಗೆ ಕೇಸ್ ಕಳಿಸಿ, ಒಂದು ಕೇಸ್‌ಗೆ 65 ಸಾವಿರ ರೂಪಾಯಿ ಕೊಡ್ತೀವಿ' ಎಂದು ಆಫರ್ ಮಾಡ್ತಾನೇ ಇದ್ದಾರೆ.

– ಡಾ.... (ದಯವಿಟ್ಟು ಹೆಸರು ಬೇಡ)




## Dr Urmila Nischal

MD, FID(Germany), FAAD(USA)
**Consultant Dermatologist**
**&**
**Cosmetic Dermatologist**



**1) ತೊನ್ನು (ಬಿಳಿ ಮಚ್ಚೆ) ಖಾಯಿಲೆ ಇರುವವರು ಯಾವ ಪಥ್ಯವನ್ನು ಅನುಸರಿಸಬೇಕು?**

ತೊನ್ನಿನ ಖಾಯಿಲೆ ಇರುವವರು ಉಳಿ ಪದಾರ್ಥಗಳನ್ನು ಸೇವಿಸಬಾರದು. ಉಳಿ ಮೊಸರು ಅಥವಾ ಮಜ್ಜಿಗೆ, ಮೊಸಂಬಿ, ಕಿತ್ತಳೆ, ಚಕೋತ, ನಿಂಬೆಹಣ್ಣು ಮತ್ತು ಎಲ್ಲಾ ಬಗೆಯ Berryಗಳನ್ನು (Strawberry, Cranberry, Blueberry) ತಿನ್ನಬಾರದು. ಗೋಡಂಬಿ ಮತ್ತು ಗೋಡಂಬಿಯ ಸಿಹಿ ತಿನಿಸುಗಳನ್ನು ವರ್ಜಿಸುವುದು ಉತ್ತಮ. ಈರುಳ್ಳಿ, ಸೇಬಿನ ಹಣ್ಣು, ಉಪ್ಪು ನೀರಿನ ಮೀನನ್ನು ಹೆಚ್ಚು ಸೇವಿಸಿ.

**2) ನನಗೆ ಹಲವೊಮ್ಮೆ ಯಾವುದೇ ಕಾರಣವಿಲ್ಲದೆ ಪೂರ್ತಿ ಶರೀರದಲ್ಲಿ ಬರೆ ಬಂದಂತೆ ಬರುತ್ತದೆ. ಬಹಳಷ್ಟು ಬಾರಿ ನಾನು ಯಾವುದೇ ಚಿಕಿತ್ಸೆಯನ್ನು ಮಾಡದೆ ಅದು ಹೊರಟು ಹೋಗುತ್ತದೆ.**

ಇದಕ್ಕೆ Urticaria ಅನ್ನುತ್ತೇವೆ. ಇದು ಒಂದು ಬಗೆಯ ಅಲರ್ಜಿ ಖಾಯಿಲೆ. ಶರೀರದಲ್ಲಿ ಎಲ್ಲಿ ಇನ್‌ಫೆಕ್ಷನ್ ಇದ್ದರೂ ಹೀಗೆ ಆಗಬಹುದು. ಹುಳುಕು ಹಲ್ಲು, ಅತೀವ ನೆಗಡಿ, ಕಿವಿ ಸೋರುವುದು, ಹೊಟ್ಟೆಯಲ್ಲಿ ಜಂತು ಹುಳುಗಳು ಮತ್ತು ತುಂಬಾ acidity ಆದಾಗ ಹೀಗೆ ಆಗಬಹುದು. ಅಲ್ಲದೆ ಎಣ್ಣೆಯಲ್ಲಿ ಕರಿದ ತಿನಿಸುಗಳು, canned ತಿನಿಸುಗಳು, sauce, ketchupಗಳನ್ನು ಸೇವಿಸಿದಾಗ ಇದು ಹೆಚ್ಚಾಗುತ್ತದೆ. ಕೆಲವೊಮ್ಮೆ ಬಾಳೆಹಣ್ಣು, ಗೋಡಂಬಿ, ಮೀನು, ಮೊಟ್ಟೆಯನ್ನು ತಿಂದಾಗ ಹೀಗಾಗಬಹುದು ಮಾನಸಿಕ ಒತ್ತಡ ಯಾವುದೇ ಕಾರಣದಿಂದಾದರೂ ಹೀಗಾಗಬಹುದು. ತಣ್ಣನೆಯ ಗಾಳಿ, ತಂಪು ಪಾನೀಯ, ಐಸ್‌ಕ್ರೀಂಗಳಿಂದ ಕೆಲವರಿಗೆ ಈ ಬಗೆಯ rashes ಆಗುತ್ತದೆ.

**3) ಬೊಕ್ಕತಲೆ ಸಮಸ್ಯೆ ನನ್ನ ತಂದೆ ಮತ್ತು ನನ್ನ ಅಣ್ಣನಿಗೆ ಇದೆ. ಈ ಸಮಸ್ಯೆಯನ್ನು ಮೊದಲ ಹಂತಗಳಲ್ಲೆ ಗುರುತಿಸಬಹುದೆ?**

ಬೊಕ್ಕತಲೆಯನ್ನು ಇದುವರೆಗೆ ರೋಗಿಯನ್ನು ಕಣ್ಣಾರೆ ನೋಡಿ ಚಿಕಿತ್ಸೆಯನ್ನು ಶುರು ಮಾಡುತ್ತಿದ್ದೆವು. ಆದರೆ ಈಗ Trichoscopyಯನ್ನು ಅಥವಾ skin biopsy ಮಾಡಬಹುದು. Trichoscope ಅನ್ನುವ ಒಂದು ಪರಿಕರದಿಂದ ಕೂದಲನ್ನು ಪರೀಕ್ಷಿಸಬಹುದು. ಈ ಉಪಕರಣದಿಂದ ತಲೆಯಲ್ಲಿ ಎಷ್ಟು ಕೂದಲಿದೆ, ಅವು ದಪ್ಪಗೆ ಇದೆಯಾ ಅಥವಾ ತೆಳ್ಳಗೆ ಆಗುತ್ತಿದೆಯೊ ನೋಡಬಹುದು. ಹಲವು ಬಾರಿ Trichoscopy ಪರೀಕ್ಷೆ ಮಾಡಿದಾಗ skin / scalp biopsy ಬೇಕಾಗಬಹುದು. ಚಿಕಿತ್ಸೆಯನ್ನು ಶುರುಮಾಡಿದ ನಂತರವೂ ನಿಮ್ಮ ಕೂದಲ ಬೆಳವಣಿಗೆಯನ್ನು ಇದರಿಂದ ಅಳೆಯಬಹುದು.



Readers can send their queries at:
**reachus@nirmalskinclinic.com.**